ಸಿರಿಗೆರೆ	1
ಕಂದವಾಡಿ	1
ಹೊಸರಂಗಾಪುರ	1
ಬೇಡರಶಿವನಗರ	1
ದೊಡ್ಡಿಗನಹಾಳ್	1
ಬಿಳಿಗಟ್ಟೆ	1
ಒಟ್ಟು ಫಲಾನುಭವಿಗಳು	**40**

ಆ) ಹಣ ಬಿಡುಗಡೆ ಕೋರಿಕೆ

ಸಲ್ಲಿಸಿದ ಅರ್ಜಿಗಳ ಸಂಖ್ಯೆ	– 64
ಪುರಸ್ಕೃತ ಅರ್ಜಿಗಳು	– 40
ತಿರಸ್ಕೃತ ಅರ್ಜಿಗಳ ಸಂಖ್ಯೆ	– 22
ಬಾಕಿ ಇರುವ ಅರ್ಜಿಗಳು	– 02
ಒಟ್ಟು ಅರ್ಜಿಗಳು	**– 64**

1167 (1281) ಶ್ರೀಮತಿ ಭಾಗೀರಥಿ. ಟಿ(ಕೊಟ್ಟೂರು) : ಮಾನ್ಯ ಆಹಾರ ಮತ್ತು ನಾಗರಿಕ ಸರಬರಾಜು ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ರಾಜ್ಯದಲ್ಲಿರುವ ಹಳದಿ, ನೀಲಿ ಹಾಗೂ ಇತರೆ ಪಡಿತರ ಚೀಟಗಳ ಫಲಾನುಭವಿಗಳೆಷ್ಟು;

ಆ) ಈವರೆಗೂ, ಸಮರ್ಪಕವಾಗಿ ಹಂಚಲಾಗಿರುವ ಪಡಿತರ ಚೀಟಗಳೆಷ್ಟು; ಇನ್ನು ಹಂಚ ಬೇಕಾಗಿರುವುದೆಷ್ಟು;

ಇ) ಬಳ್ಳಾರಿ ಜಿಲ್ಲೆಯ ಕೂಡ್ಲಿಗಿ ತಾಲ್ಲೂಕಿನ ಪಡಿತರ ಚೀಟಿಯ ಫಲಾನುಭವಿಗಳ ಸಂಖ್ಯೆ ಎಷ್ಟು; ಈ ತಾಲ್ಲೂಕಿನಲ್ಲಿ ತಿಂಗಳೊಂದಕ್ಕೆ ಎಷ್ಟು ಆಹಾರ ಧಾನ್ಯವನ್ನು ಹಂಚಲಾಗುವುದು?

ಶ್ರೀ ಗೋವಿಂದ ಎಂ.ಕಾರಜೋಳ (ಮಾನ್ಯ ಆಹಾರ ಮತ್ತು ನಾಗರಿಕ ಸರಬರಾಜು ಸಚಿವರು) :

ಅ) ರಾಜ್ಯದಲ್ಲಿರುವ ಇದುವರೆವಿಗೂ ವಿತರಿಸಿರುವ ಪಡಿತರ ಕೂಪನ್‌ಗಳ ವಿವರ (ಬೆಂಗಳೂರು ಅನೌಪಚಾರಿಕ ಪಡಿತರ ಪ್ರದೇಶ ಹಾಗೂ

ಬೆಂಗಳೂರು ನಗರ ಜಿಲ್ಲೆಯ ಈ ಹಿಂದಿನ 7 ನಗರ ಸಭೆಗಳ ಪಡಿತರ ಚೀಟಿಗಳು ಸೇರಿ)

ಈ ಕೆಳಕಂಡಂತ್ತಿದೆ.

ಅನ್ನಪೂರ್ಣ	–	25,552
ಎಎವೈ	–	11,75,903
ಅಕ್ಷಯ (ಬಿಪಿಎಲ್)	–	61,27,982
ಎಪಿಎಲ್	–	45,52,766
ಒಟ್ಟು		**1,18,82,203**

ಆ) ಈವರೆಗೆ 1,18,82,203 ಪಡಿತರ ಕೂಪನ್‌ಗಳನ್ನು ವಿತರಿಸ ಲಾಗಿರುತ್ತದೆ.

ಇದುವರೆವಿಗೂ ಪಡಿತರ ಚೀಟಿ ಪಡೆಯದ ಅರ್ಹ ಕುಟುಂಬ ಗಳನ್ನು ಗುರುತಿಸಿ ಪಡಿತರ ಕೂಪನ್‌ಗಳನ್ನು ನೀಡಲು ಜಿಲ್ಲಾಧಿಕಾರಿಗಳಿಗೆ ಈಗಾಗಲೇ ಸೂಚಿಸಲಾಗಿದೆ.

ಇ) ಬಳ್ಳಾರಿ ಜಿಲ್ಲೆಯ ಕೂಡ್ಲಿಗಿ ತಾಲ್ಲೂಕಿನಲ್ಲಿ 12,482 ಎಎವೈ 29,162 ಅಕ್ಷಯ, 14,344 ಎಪಿಎಲ್ ಒಟ್ಟು 55,988 ಪಡಿತರ ಚೀಟಿಗಳನ್ನು ವಿತರಿಸಲಾಗಿದೆ.

ಈ ತಾಲ್ಲೂಕಿನಲ್ಲಿ ತಿಂಗಳೊಂದಕ್ಕೆ 8795 ಕ್ವಿಂಟಾಲ್ ಅಕ್ಕಿ, 2,073 ಕ್ವಿಂ, ಗೋಧಿ, 806.21 ಕ್ವಿಂ ಸಕ್ಕರೆ ಹಾಗೂ 228 ಕೆ.ಎಲ್. ಸೀಮೆಎಣ್ಣೆಯನ್ನು ಹಂಚಲಾಗುತ್ತಿದೆ.

1169 (1272) ಶ್ರೀ ಗುರುಪಾದಪ್ಪ ನಾಗಮಾರಪಲ್ಲಿ (ಔರಾದ್) : ಮಾನ್ಯ ಸಹಕಾರ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ರಾಜ್ಯದಲ್ಲಿ ಕಳೆದ 3 ವರ್ಷಗಳ ಅವಧಿಯಲ್ಲಿ ಸಹಕಾರಿ ಸಂಸ್ಥೆಗಳು ಸರ್ಕಾರದ ಆದೇಶದಂತೆ ಬಡ್ಡಿ ಮತ್ತು ಸಾಲ ಮನ್ನಾ ಯೋಜನೆಗಳನ್ನು ಅನುಷ್ಠಾನಗೊಳಿಸಿದ್ದಕ್ಕಾಗಿ ಸರ್ಕಾರವು ಸಹಕಾರಿ ಸಂಸ್ಥೆಗಳಿಗೆ, ಜಿಲ್ಲಾ ಕೇಂದ್ರ ಸಹಕಾರ ಬ್ಯಾಂಕುಗಳಿಗೆ ಮತ್ತು ಅಪೆಕ್ಸ್ ಬ್ಯಾಂಕಿಗೆ ಇನ್ನು ನೀಡಬೇಕಾಗಿರುವ ಮೊತ್ತವೆಷ್ಟು?